

# ಚಂದನವನದಲ್ಲಿ ಮಲೆಯಾಳಂ ಚಿಟ್ಟೆ

ಮಲೆಯಾಳಂನ 'ಬ್ಲ್ಯಾಕ್ ಬಟರ್‌ಫ್ಲೈ' ಸಿನಿಮಾದಲ್ಲಿ ತಮ್ಮ ಸಾದಾಸೀದಾ ನಟನೆಯಿಂದ ನೋಡುಗರ ಮನ ಗೆದ್ದಿದ್ದ ನಟಿ ಮಾಳವಿಕಾ ನಾಯರ್, ಇದೀಗ ಚಂದನವನದಲ್ಲಿ ರುಜು ಹಾಕುವ ತಯಾರಿಯಲ್ಲಿದ್ದಾರೆ.

ನಟ ಗಣೇಶ್ ಜೊತೆ ಮಾಳವಿಕಾ ನಾಯರ್ ನಟಿಸುತ್ತಿದ್ದು, ಸಿನಿಮಾ ಚಿತ್ರೀಕರಣ ಈಗಾಗಲೇ ಆರಂಭವಾಗಿದೆಯಂತೆ.

ಚಿಕ್ಕವಯಸ್ಸಿಗೆ ಅಭಿನಯಕ್ಕೆ ಇಳಿದ ಮಾಳವಿಕಾ, ತಮಿಳು, ತೆಲುಗು, ಮಲೆಯಾಳಂ ಭಾಷೆಯ ಹಲವು ಸಿನಿಮಾಗಳಿಗೆ ಬಣ್ಣ ಹಚ್ಚಿದ್ದಾರೆ. ಶಾಲೆಯಲ್ಲಿದ್ದಾಗಲೇ ಜಾಹೀರಾತುಗಳಿಗೆ ಮಾಡೆಲಿಂಗ್ ಮಾಡಲು ಆರಂಭಿಸಿದ್ದರು. ನಂತರ 'ರಿತುಕ್ಕಲ್' ಎಂಬ ಮ್ಯೂಸಿಕ್ ವಿಡಿಯೊದಲ್ಲಿ ಕಾಣಿಸಿಕೊಂಡರು. 13ನೇ ವಯಸ್ಸಿಗೇ ನಟನೆಯಲ್ಲಿ ಅವಕಾಶಗಳು ಹುಡುಕಿಕೊಂಡು ಬರಲು ಆರಂಭವಾದವು. 'ಉಸ್ತಾದ್ ಹೋಟೆಲ್', 'ಕರ್ಮಯೋಧ' ಸಿನಿಮಾಗಳಲ್ಲಿ ಚಿಕ್ಕಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡ ಅವರಿಗೆ ಜನಪ್ರಿಯತೆ ತಂದುಕೊಟ್ಟದ್ದು 'ಬ್ಲ್ಯಾಕ್ ಬಟರ್‌ಫ್ಲೈ' ಸಿನಿಮಾ.

ಆ್ಯಸಿಡ್ ದಾಳಿಗೆ ತುತ್ತಾದ ಮನೆಗೆಲಸದಾಕೆ ರೀನಾ ಪಾತ್ರಕ್ಕೆ ಬಣ್ಣ ಹಚ್ಚಿದ ನಂತರ 'ಕುಕ್ಕೂ' ಎಂಬ ತಮಿಳು ಸಿನಿಮಾದಲ್ಲಿ ಕುರುಡಿಯ ಪಾತ್ರದಲ್ಲಿ ಕಾಣಿಸಿಕೊಂಡರು. ಈ ಎರಡೂ ಪಾತ್ರಗಳು ಅವರಿಗೆ ಸಿನಿಮಾ ರಂಗದಲ್ಲಿ ಭದ್ರ ನೆಲೆಯೊಂದನ್ನು ಕಲ್ಪಿಸಿಕೊಟ್ಟಿದ್ದವು.

ಮಲೆಯಾಳಂ ಭಾಷೆಯಿಂದ ಗುರುತಿಸಿಕೊಂಡಿದ್ದರೂ ತೆಲುಗು ಸಿನಿಮಾರಂಗದಲ್ಲಿ ತಮ್ಮದೇ ಅಭಿಮಾನಿ ಬಳಗ ಹೊಂದಿದ್ದಾರೆ ಮಾಳವಿಕಾ. ಅವರು ನಟಿಸಿರುವ ಹದಿನಾರು ಸಿನಿಮಾಗಳ ಪೈಕಿ ಹತ್ತು ಸಿನಿಮಾ ತೆಲುಗು ಭಾಷೆಯದ್ದೇ ಆಗಿದೆ. ಇದೀಗ ಕನ್ನಡ ಸಿನಿಮಾರಂಗದಲ್ಲೂ ತಮ್ಮ ಅದೃಷ್ಟವನ್ನು ಪರೀಕ್ಷೆಗೆ ಒಡ್ಡಲು ಅಣಿಯಾಗಿದ್ದಾರೆ.

ಮಾಳವಿಕಾ ನಟಿಸುತ್ತಿರುವ ಈ ಕನ್ನಡ ಸಿನಿಮಾಗೆ ಇನ್ನೂ ಹೆಸರಿಟ್ಟಿಲ್ಲ. ದಂಡುಪಾಳ್ಯ ಸಿನಿಮಾ ಖ್ಯಾತಿಯ ನಿರ್ದೇಶಕ ಶ್ರೀನಿವಾಸ್ ರಾಜು ಈ ಸಿನಿಮಾ ನಿರ್ದೇಶನ ಮಾಡುತ್ತಿದ್ದಾರೆ. ಚಿತ್ರೀಕರಣ ಈಗಾಗಲೇ ಆರಂಭವಾಗಿದ್ದು, ಕೆಲವೇ ದಿನಗಳಲ್ಲಿ ಮಾಳವಿಕಾ ಜೊತೆಯಾಗಲಿದ್ದಾರೆ. ಮಾಳವಿಕಾ ಪಾತ್ರದ ಬಗ್ಗೆ ಚಿತ್ರತಂಡ ಯಾವುದೇ ಸಂಗತಿ ಬಿಟ್ಟುಕೊಟ್ಟಿಲ್ಲ. ■

# ಹಳೆಯ ದಿನಗಳಲ್ಲಿ ಉಪೇಂದ್ರ



'ಸಿನಿಮಾ ಕ್ಯಾನ್ವಾಸ್‌ಗೆ ಚೌಕಟ್ಟು ಎಂಬುದೇ ಇಲ್ಲ. ನಮ್ಮ ಕಲ್ಪನೆಗೂ ಕೊನೆಯಿಲ್ಲ. ಇವೆರಡನ್ನೂ ಸರಿಯಾಗಿ ಒಂದಾಗಿಸಿದರೆ ಜಾದೂ ಮಾಡಿಬಿಡಬಹುದು...' ರಿಯಲ್ ಸ್ಟಾರ್ ಉಪೇಂದ್ರ ಈಚೆಗೆ ಸಂದರ್ಶನವೊಂದರಲ್ಲಿ ಸಿನಿಮಾ ಕುರಿತು ಹೀಗೆ ಮಾತನಾಡಿದ್ದಾರೆ.

ನಟ ಉಪೇಂದ್ರ ಸಿನಿಮಾ ರಂಗಕ್ಕೆ ಕಾಲಿಟ್ಟು 30 ವರ್ಷಗಳು ಕಳೆದಿವೆ. ನಟನಾಗಿ, ನಿರ್ದೇಶಕನಾಗಿ ಕನ್ನಡ ಚಿತ್ರರಂಗದಲ್ಲಿ ಇಷ್ಟು ವರ್ಷಗಳು ಕಳೆದರೂ ತಮ್ಮನ್ನು ತಾವು ಹೊಸದಾಗಿ ನಿರೂಪಿಸಿಕೊಳ್ಳುವ ಹಂಬಲ ಸದಾ ತಮ್ಮಲ್ಲಿರುವುದಾಗಿ ಹೇಳುತ್ತಾರೆ. ಇಷ್ಟು ವರ್ಷಗಳ ಸಿನಿಮಾ ಪಯಣದಲ್ಲಿ ಕಂಡುಂಡ ಅನುಭವಗಳನ್ನೂ ಹಂಚಿಕೊಂಡಿದ್ದಾರೆ.

'ಕಳೆದ 30 ವರ್ಷಗಳಲ್ಲಿ ಸಿನಿಮಾ ರಂಗದಲ್ಲಿ ಊಹಿಸಲಾಗದಷ್ಟು ಬದಲಾವಣೆ ಆಗಿದೆ. ಈ ಬದಲಾವಣೆ ಒಳ್ಳೆಯದು, ಜೊತೆಗೆ ಅಷ್ಟೇ ಭಯ ಹುಟ್ಟಿಸುತ್ತದೆ. ಈಗ, ಕೆಲವು ಸಂಗತಿಗಳನ್ನು ಅದೆಷ್ಟು ಸುಲಭವಾಗಿ ದಾಟಿಸಿಬಿಡಬಹುದು ಎಂಬುದನ್ನು ಕಂಡಾಗ ಕೆಲವೊಮ್ಮೆ ತಬ್ಬಿಬ್ಬಾಗಿಬಿಡುತ್ತೇನೆ. ಅಷ್ಟರಮಟ್ಟಿಗೆ ತಂತ್ರಜ್ಞಾನ ಬೆಳೆದಿದೆ. ಆದರೆ ಎಲ್ಲರೂ ಒಟ್ಟಾಗಿ ಕುಳಿತು ಕೆಲಸ ಮಾಡುತ್ತಿದ್ದ, ಅದರಲ್ಲೂ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿ ಎಲ್ಲರೂ ಒಟ್ಟಿಗೆ ಕೆಲಸ ಮಾಡುತ್ತಿದ್ದ ಆ ಒಳ್ಳೆಯ, ಹಳೆಯ ದಿನಗಳನ್ನು ಈಗ ತುಂಬಾ ಮಿಸ್ ಮಾಡಿಕೊಳ್ಳುತ್ತೇನೆ. ಈಗ ಎಲ್ಲ ಡಿಜಿಟಲ್ ಆಗಿದೆ. ತಂತ್ರಜ್ಞಾನ ಮುಂದುವರೆದಂತೆ, ಕೆಲವು ಸೌಂದರ್ಯವನ್ನೂ ಮಿಸ್ ಮಾಡಿಕೊಳ್ಳುತ್ತಿದ್ದೇನೆ' ಎಂದು ಭಾವುಕರಾಗಿ ಮಾತನಾಡಿದ್ದಾರೆ.

ಇದೇ ಸಂದರ್ಭ, ಸಿನಿಮಾಗೆ ತಮ್ಮಲ್ಲಿ ಕಥೆ ಹುಟ್ಟುವ ಬಗೆಯನ್ನೂ ತೆರೆದಿಟ್ಟಿದ್ದಾರೆ. 'ಕಥೆಯೊಂದನ್ನು ಕಂಡುಕೊಳ್ಳಲು ಎರಡು ದಾರಿಗಳಿವೆ. ಒಂದು, ನಮ್ಮೊಳಗನ್ನು ನೋಡುವುದು, ಮತ್ತೊಂದು ಹೊರಗನ್ನು ಕಾಣುವುದು. ಇವೆರಡೂ ಒಂದಕ್ಕೊಂದು ಕನ್ನಡಿ. ಒಂದು ಕಥೆಯನ್ನು ಅರ್ಥ ಮಾಡಿಕೊಳ್ಳಬೇಕೆಂದರೆ, ನಿಮ್ಮೊಳಗೆ ನೀವು ಪ್ರಯಾಣ ಮಾಡಬೇಕು. ಇದೇ ನನಗೆ ಸಿನಿಮಾ. ನಾನು ಹೊರಗಿನ ಪ್ರಪಂಚದಲ್ಲಿ ಪಯಣಿಸಿದಾಗ 'ಓಂ' ಹಾಗೂ 'ಶ್' ಸಿನಿಮಾದಂಥವು ಸೃಷ್ಟಿಯಾಗುತ್ತವೆ. ನನ್ನೊಳಗೆ ನಾನು ಪಯಣಿಸಿದಾಗ 'ಎ' ಹಾಗೂ 'ಉಪೇಂದ್ರ'ದಂಥ ಸಿನಿಮಾಗಳು ಹುಟ್ಟಿಕೊಳ್ಳುತ್ತವೆ' ಎಂದು ಉದಾಹರಿಸಿದ್ದಾರೆ.

'UI' ಸಿನಿಮಾ ಮೂಲಕ ಮತ್ತೆ ನಿರ್ದೇಶನಕ್ಕೆ ಇಳಿದಿರುವ ಉಪೇಂದ್ರ, ಇದರೊಂದಿಗೆ, 15ನೇ ಶತಮಾನದ ಸಂತ ಕನಕದಾಸರ ಪಾತ್ರದಲ್ಲಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ನಟನೆ–ನಿರ್ದೇಶನದಲ್ಲಿ ಮತ್ತೆ ತಮ್ಮನ್ನು ಹೊಸದಾಗಿ ನಿರೂಪಿಸಿಕೊಳ್ಳುವ ತಯಾರಿಯಲ್ಲಿದ್ದಾರೆ. 'UI' ಸಿನಿಮಾ ಮೂಲಕ ವಿಷುಯಲ್ ಆಗಿ ಸಂಪೂರ್ಣ ಬೇರೆಯದೇ ಲೋಕ ಕಟ್ಟಿಕೊಡುವುದಾಗಿ ಹೇಳಿದ್ದಾರೆ. ತಾವು ಸಜ್ಜಾಗುತ್ತಿರುವ ಕನಕದಾಸ ಪಾತ್ರದ ಕುರಿತು ಮಾತನಾಡಿ, 'ಈ ಮುನ್ನ ಐತಿಹಾಸಿಕ ಪಾತ್ರದಲ್ಲಿ ಎಂದಿಗೂ ನಟಿಸಿರಲಿಲ್ಲ. ಈ ವಿಷಯ ನನಗೆ ಸಂಪೂರ್ಣ ಹೊಸತು. ಒಂದೇ ರೀತಿಯ ಸಿನಿಮಾಗಳಿಂದ ಬೋರ್ ಆದ ಜನರಿಗೆ ಇದು ರಿಫ್ರೆಶ್ ಎನಿಸಲಿದೆ' ಎಂದು ಹೇಳಿದ್ದಾರೆ. ■